# ಲೂಸ್ ಹಾಗೂ ಟೈಟ್

ಪಿಯು ಓದುತ್ತಿದ್ದ ಹುಡುಗ. ಮುಖದ ಮೇಲೆ ಗೀಚಿನ ಮಚ್ಚೆ. ಕಣ್ಣಲ್ಲಿ ಸಹಜ ಉತ್ಸಾಹ. ಕೃಶ ದೇಹ. ನಿರ್ದೇಶಕ ಚೊಚ್ಚಿಲ ಚಿತ್ರದ ಖಳರ ಸಾಲಿನಲ್ಲಿ ಈ ಹುಡುಗನನ್ನೂ ನಿಲ್ಲಿಸಿದರು. ಹೇಳಿಕೇಳಿ ನಿರ್ಮಾಪಕರ ಮಗ. ಅಂದಮೇಲೆ ಅವಕಾಶದ ಹರಹು ತುಸುವಾದರೂ ವಿಶಾಲವಾಗಬೇಕಾದುದು ಅನಿವಾರ್ಯ. ಗೆಲ್ಲಲೇಬೇಕೆಂಬ ಛಲದಲ್ಲಿ ನಿರ್ದೇಶಕರಿದ್ದರು. ಆ ಚಿತ್ರದ ನಾಯಕನಿಗೂ ವಿಜಯದ ನಿರೀಕ್ಷೆಯಿತ್ತು. ಯಾಕೆಂದರೆ, ಅವರಿಗೂ ಅದು ಮೊದಲ ಚಿತ್ರ. ಎಲ್ಲರ 'ಮೊದಲು'ಗಳ ಮಹತ್ವಾಕಾಂಕ್ಷೆ ಫಲಿಸಿತು. ಸಿನಿಮಾ ದೊಡ್ಡ ಯಶಸ್ಸು ಕಂಡಿತು.

ಆ ಸಿನಿಮಾದ ಲೂಸ್ ಪಾತ್ರದಲ್ಲಿ ಹುಡುಗನ ಪರಕಾಯ ಪ್ರವೇಶ ಮಾಡಿಸಲು ನಿರ್ದೇಶಕರು ಸಿಕ್ಕಾಪಟ್ಟೆ ಹೋಂವರ್ಕ್ ಮಾಡಿದರು. ಗಲ್ಲಿಗಳಲ್ಲಿ ಸುತ್ತಿಸಿದರು. ಲೂಸ್ ಲೂಸಾಗಿ ಇರುವವರ ತೋರಿಸಿದರು. ಸಂಭಾಷಣೆ ಬರೆಯುವಾಗಲೂ ಪಕ್ಕದಲ್ಲಿ ಕೂರಿಸಿಕೊಂಡರು. ಮಾತಿನ ಏರಿಳಿತ ಹೇಗಿರಬೇಕು ಎಂದು ಹೇಳಿಕೊಟ್ಟರು. ಹುಡುಗನ ದುನಿಯಾ ಬದಲಾಯಿತು.

ಸಿನಿಮಾಗೆ ಸಿಕ್ಕ ಪ್ರತಿಕ್ರಿಯೆ ಬೆಂಗಳೂರಿನ ಗಾಂಧಿನಗರದ ಓಣಿಗಳಲ್ಲಿ 'ಲೂಸ್' ಎಂಬ ಹೊಸ 'ಇಮೇಜ್' ಮೂಡಿಸಿತು. ನಿರ್ಮಾಪಕರು ಹುಡುಗನ ಮನೆಗೆ ಭೇಟಿ ನೀಡಲು ಮುಂದಾದರು. 'ಲೂಸ್ ಸ್ಟಾರ್' ವಾಸವಿದ್ದ ಐಷಾರಾಮಿ ಮನೆಯ ಕದ ತಟ್ಟಿದ ಅವಕಾಶಗಳು ಒಂದೆರಡಲ್ಲ. ನೋಡನೋಡುತ್ತಲೇ ನಾಯಕನಾದ ಅದೇ ಹುಡುಗ.

ಮೊದಲ ಸಿನಿಮಾ ಮಾಡಿದಾಗ ಐದಡಿ ಏಳು ಇಂಚು ಎತ್ತರವಿದ್ದ ಸಿನಿಪ್ರೇಮಿ ಹುಡುಗ ಕೆಲವೇ ವರ್ಷಗಳಲ್ಲಿ ಐದಡಿ ಹನ್ನೊಂದು ಇಂಚು ಉದ್ದವಾಗಿಬಿಟ್ಟ. ಮರ್ಯಾದೆ ಕೊಡಲೇಬೇಕು. ಯುವಕ ಆದಮೇಲೆ 'ಸರ್', 'ಅವರು' ಎಂಬ ಸಂಬೋಧನೆ. ದೊಡ್ಮನೆ ಹುಡುಗ ಅಭಿನಯಿಸಿದ ಬಹುನಾಯಕರ ಚಿತ್ರದಲ್ಲಿ ಈ ಯುವಕ ಕೂಡ ಒಬ್ಬನಾದುದು ಗಮನಾರ್ಹ. ಅದಾದ ನಂತರ ಅಂಥದೇ ಇನ್ನೊಂದು ಚಿತ್ರದಲ್ಲಿ ಅಭಿನಯಾವಕಾಶ.

ಚಿತ್ರರಂಗದಲ್ಲಿ ಏರಿಳಿತಗಳು ಸಹಜ. ಹಾಗಂತ ಅಭಿರುಚಿಯಲ್ಲಿ ರಾಜಿ ಮಾಡಿಕೊಂಡರೆ ಎಡವಿದಂತೆಯೇ. ಪ್ರಯೋಗಶೀಲ ಚಿತ್ರಗಳ ಭಾಗವಾದ ಮೇಲೆ ರೀಮೇಕ್ ಬೀಸಿಗೂ ಒಗ್ಗಿಕೊಂಡರು. ಆಗ ಸೋಲುಗಳ ಸರಣಿ ಶುರುವಾಯಿತು. 'ಟೈಮಿಗೆ ಸರಿಯಾಗಿ ಶೂಟಿಂಗ್‌ಗೆ ಬರದೇ ಇದ್ದರೆ ಅಲ್ಲಿಗೆ ನಾಯಕನಿಗೆ ತಲೆ ತಿರುಗತೊಡಗಿದೆ ಎಂದೇ ಅರ್ಥ' ಎಂದು ಒಬ್ಬ ನಿರ್ಮಾಪಕರು ಕಮೆಂಟಿಸಿದ್ದರು. ಸೂಪರ್ ಬೈಕ್ ಕೊಂಡು, ಅದರ ಮೇಲೆ ತನ್ನಿಷ್ಟದ ನಟಿಯನ್ನು ಕೂರಿಸಿಕೊಂಡು ರೌಂಡ್ ಹೊಡೆದದ್ದೂ ಸುದ್ದಿ. ಅಪಘಾತಕ್ಕೀಡಾದ ಅದೇ ಬೈಕನ್ನು ಮಾರಿದ್ದೂ ಸುದ್ದಿ. ಅವರೀಗ ಹೆಚ್ಚು ಚಾಲ್ತಿಯಲ್ಲಿ ಇಲ್ಲ. ಕಾಲ ಬದಲಾಗುತ್ತಾ ಇರುತ್ತದೆ.

**• ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68